**<u>ದಿನಾಂಕಃ 25-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿ ನಂ.4 ರಿಂದ 6 ರವರ ಪರ ಶ್ರೀ ಪಿ.ಡಿ.ಎಸ್. ವಕೀಲರಿಂದಃ</u>**

ನಾನು ಸಾಕ್ಷ್ಯ ಪ್ರಮಾಣ ಪತ್ರವನ್ನು ತಯಾರಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಮೂಲ ಪುರುಷ ರಾಮನಗೌಡ ಹಾಗೂ ಆತನ ಹೆಂಡತಿ ನೀಲಮ್ಮ ನನ್ನ ತಂದೆ-ತಾಯಿ ಎಂದರೆ ಸರಿ. ನನ್ನ ತಂದೆ 1988 ರಂದು ಹಾಗೂ ನನ್ನ ತಾಯಿ 2021 ರಲ್ಲಿ ತೀರಿಕೊಂಡರು ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ಅಣ್ಣನ ಹೆಂಡತಿ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಅಣ್ಣನ ಮಗ ಎಂದರೆ ಸರಿ. 4 ರಿಂದ 6 ನೇ ಪ್ರತಿವಾದಿಯರು ನನ್ನ ಸಹೋದರಿಯರು ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ಅಣ್ಣನ ಮಗಳು ಎಂದರೆ ಸರಿ.

02. ದಾವಾ ಸ್ವತ್ತುಗಳು ನನ್ನ ತಂದೆಯ ಆಸ್ತಿಗಳು ಎಂದರೆ ಸರಿ. ನಾನು ಹಾಜರು ಪಡಿಸಿದ ಪಹಣಿ ಪತ್ರಿಕೆಗಳಲ್ಲಿ 1 ರಿಂದ 3 ನೇ ಪ್ರತಿವಾದಿಗಳು ಖೊಟ್ಟಿ ರೀತಿಯಿಂದ ತಮ್ಮ ಹೆಸರನ್ನು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿಯವರು ತಮ್ಮ ಹೆಸರುಗಳನ್ನು ನಮ್ಮನ್ನು ಬಿಟ್ಟು ಖಾತೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆದರೂ ಸಹ ದಾವಾ ಸ್ವತ್ತುಗಳಲ್ಲಿ ನಮ್ಮ ಹಕ್ಕು ವ ಹಿಸ್ಸೆ ನಷ್ಟ ಆಗಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನಮಗೆ ಕಾನೂನು ಬದ್ಧ ಹಕ್ಕುಗಳು ಇವೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ವಾದಿಗಳಾದ ನಮಗೆ ಹಾಗೂ ಇತರ ಪ್ರತಿವಾದಿಯರಿಗೆ ತಲಾ 1/6 ಹಿಸ್ಸೆ ಇದೆ ಎಂದರೆ ಸರಿ.

**<u>ಪಾಟೀ ಸವಾಲು ಪ್ರತಿವಾದಿ ನಂ.8 ರವರ ಪರ ಶ್ರೀ ಎನ್.ಎಸ್.ಬಿ. ವಕೀಲರಿಂದಃ</u>**

ದಾವಾ 6 ನೇ ಸ್ವತ್ತು ಅಂದರೆ ಸರ್ವೆ ನಂ.17/2 ಕದರಮಂಡಲಗಿ ಗ್ರಾಮದ ಕಾಂತೇಶ ಎಂಬುವವರ ಹೆಸರಿನಲ್ಲಿದೆ. ಸದರಿ ಸ್ವತ್ತನ್ನು 1 ರಿಂದ 3 ನೇ ಪ್ರತಿವಾದಿಯರು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ 1 ರಿಂದ 3 ನೇ ಪ್ರತಿವಾದಿಯರಿಗೆ 8 ನೇ ಪ್ರತಿವಾದಿ ಹಣ ನೀಡಿ ಸದರಿ ಸ್ವತ್ತನ್ನು ಖರೀದಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವ್ಯವಹಾರಕ್ಕೆ ನಾವು ಸಹಿ ಮಾಡಿಲ್ಲ ಎನ್ನುತ್ತಾರೆ.

ಸದರಿ ಆರ್.ಟಿ.ಸಿ ಗೆ ನನ್ನ ಹೆಸರು ಸದರಿ ಖರೀದಿ ಪಡೆಯುವ ಸಮಯದಲ್ಲಿ ಇರಲಿಲ್ಲ ಆದ್ದರಿಂದ ನನ್ನ ಸಹಿ ಪಡೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರ ದಿನಾಂಕಃ18.03.2015 ರಂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಪಡೆದ ದಿನದಿಂದ ಸದರಿ ಜಮೀನನ್ನು 8 ನೇ ಪ್ರತಿವಾದಿಯೇ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಜಮೀನನ್ನು 8 ನೇ ಪ್ರತಿವಾದಿ ಖರೀದಿಸಿದ ನಂತರ ಆತ ಅದನ್ನು ತನ್ನ ಹೆಂಡತಿಯ ಹೆಸರಿಗೆ ದಾನಪತ್ರ ಮಾಡುವುದರ ಮೂಲಕ ನೀಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಹಾಗೂ ಅದರನ್ವಯ ಸದರಿ 8 ನೇ ಪ್ರತಿವಾದಿಯ ಹೆಂಡತಿಯ ಹೆಸರು ಅಂದರೆ ರೇಖಾ ರವರ ಹೆಸರು ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

02. ನನ್ನ ತಂದೆಗೆ ಒಟ್ಟು 18 ಎಕರೆ ಜಮೀನು ಇತ್ತು. ಆ ಪೈಕಿ ಎಷ್ಟು ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 3-4 ಎಕರೆ ಜಮೀನು ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ದಾವಾ ಆಸ್ತಿ 6 ನೇ ಸ್ವತ್ತನುನ ಬಿಟ್ಟು 1 ರಿಂದ 3 ನೇ ಪ್ರತಿವಾದಿಯರು ಅವರ ಮನೆತನದ 2 ಜಮೀನುಗಳಾದ ಬನ್ನಿಹಟ್ಟಿ ಗ್ರಾಮದ ಸರ್ವೆ ನಂ.20/4 ಕ್ಷೇತ್ರ 01 ಎಕರೆ ಮತ್ತು ಸರ್ವೆ ನಂ.20/9 ಕ್ಷೇತ್ರ 24 ಗುಂಟೆಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನುಗಳನ್ನು ಬಸವರಾಜ ಮರಡೆಪ್ಪ ಪೂಜಾರ ಮತ್ತು ಮಲ್ಲಿಕಾರ್ಜುನ ಬಸವರಾಜ ಪೂಜಾರ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಅದೇರೀತಿ ಖರಿದಿದಾರರನ್ನು ಸಹ ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ಜಮೀನುಗಳನ್ನು ಸದರಿ ಬಸವರಾಜ ಮರಡೆಪ್ಪ ಪೂಜಾರ ಮತ್ತು ಮಲ್ಲಿಕಾರ್ಜುನ ಬಸವರಾಜ ಪೂಜಾರ ರವರು ಖರೀದಿಸಿದ್ದಾಗಿನಿಂದ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ಸದರಿ ಜಮೀನುಗಳನ್ನು 1 ರಿಂದ 3 ನೇ ಪ್ರತಿವಾದಿಯರು ಮಾರಾಟ ಮಾಡಿದ್ದಾರೆ ಎಂದು ನನಗೆ ಈ ದಾವೆಯಲ್ಲಿ ದಾಖಲಿಸುವ ಪೂರ್ವದಲ್ಲಿಯೇ ಗೊತ್ತಿತ್ತು ಎಂದರೆ ಸರಿ. ಆದರೂ ಸಹ ಸದರಿ ಖರೀದಿದಾರರನ್ನು ಬಿಟ್ಟು 8 ನೇ ಪ್ರತಿವಾದಿಯನ್ನು ಸೇರಿಸಿ ಸುಳ್ಳು ದಾವೆ ದಾಖಲಿರುತ್ತೇವೆ ಎಂದರೆ ಸರಿಯಲ್ಲ.

03. ಸದರಿ ದಾವಾ 6 ನೇ ಸ್ವತ್ತನ್ನು 8 ನೇ ಪ್ರತಿವಾದಿ ಖರೀದಿಸುವ ಪೂರ್ವದಲ್ಲಿ ಸೂಕ್ತವಾದ ಚೌಕಾಸಿ ಮಾಡಿ ಪ್ರಾಮಾಣಿಕವಾಗಿ 1 ರಿಂದ 3 ನೇ ಪ್ರತಿವಾದಿಯವರಿಂದ ಖರೀದಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯನ್ನು ಸರ್ವೆ ನಂ.36 ಕ್ಷೇತ್ರ 01 ಎಕರೆ 34 ಗುಂಟೆ, ಸರ್ವೆ ನಂ.36/2 ಕ್ಷೇತ್ರ 01 ಎಕರೆ ಹಾಗೂ ಇತರ ಜಮೀನುಗಳಿಗೆ ಸಂಬಂಧಿಸಿದಂತೆ ದಾಖಲಿಸಿರುತ್ತೇನೆ. ನನಗೆ ಸದರಿ ಸರ್ವೆ ನಂಬರಗಳು ನನಗೆ ನೆನಪಿಲ್ಲ. ನಾನು 9 ಆಸ್ತಿಗಳಿಗೆ ಸಂಬಂಧಿಸಿದಂತೆ ಈ ದಾವೆಯನ್ನು ದಾಖಲಿಸಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.